# ಶರಣ ಅಂಬಿಗರ ಚೌಡಯ್ಯನ ವಚನಗಳಲ್ಲಿ ಜೀವನ ಮೌಲ್ಯ

**ಎಸ್.ಬಿ. ಜಾಧವ***

**DOI: https://doi.org/10.5281/zenodo.19501332**

**ABSTRACT**

ಹನ್ನೆರಡನೆಯ ಶತಮಾನದ ಶರಣ ಚಳವಳಿಯಲ್ಲಿ ಅಂಬಿಗರ ಚೌಡಯ್ಯನವರದು ಅತ್ಯಂತ ವಿಶಿಷ್ಟ ಹಾಗೂ ದಿಟ್ಟ ವ್ಯಕ್ತಿತ್ವ. ವೃತ್ತಿಯಿಂದ ದೋಣಿ ನಡೆಸುವ ಅಂಬಿಗರಾದ ಇವರು, ಪ್ರವೃತ್ತಿಯಲ್ಲಿ ಅಸಾಧಾರಣ ಅನುಭಾವಿಯಾಗಿದ್ದರು. ಜಾತಿಭೇದ, ಲಿಂಗಭೇದ ಹಾಗೂ ಮೌಢ್ಯಗಳ ವಿರುದ್ಧ ತಮ್ಮ ವಚನಗಳ ಮೂಲಕ ನೇರವಾಗಿ ಸಿಡಿದೆದ್ದ ಚೌಡಯ್ಯನವರ ಸಾಹಿತ್ಯದಲ್ಲಿ ಅಡಗಿರುವ ಜೀವನ ಮೌಲ್ಯಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಡಾಂಭಿಕ ಭಕ್ತಿ, ಕಂದಾಚಾರ, ಮೂಢನಂಬಿಕೆ ಹಾಗೂ ಸ್ವಾರ್ಥಿ ಗುರು–ಶಿಷ್ಯ ಪರಂಪರೆಯನ್ನು ಕಟುವಾಗಿ ಟೀಕಿಸುವ ಇವರ ವಚನಗಳು, ನೈತಿಕ ಮತ್ತು ಪರಿಶುದ್ಧ ಬದುಕಿಗೆ ಒತ್ತು ನೀಡುತ್ತವೆ. ಮನುಷ್ಯನ ತ್ರಿಕರಣ ಶುದ್ಧಿಯೇ ನಿಜವಾದ ಭಕ್ತಿ ಎಂದು ಪ್ರತಿಪಾದಿಸುತ್ತಾ, ಹುಟ್ಟಿನ ಬದಲು ಗುಣ–ನಡವಳಿಕೆಗಳ ಆಧಾರದ ಮೇಲೆ ಮನುಷ್ಯನ ಶ್ರೇಷ್ಠತೆಯನ್ನು ಅವರು ಅಳೆಯುತ್ತಾರೆ. ಸಮಾನತೆ, ಸತ್ಯ ಮತ್ತು ಸಾಮಾಜಿಕ ಕಳಕಳಿಯನ್ನು ಸಾರುವ ಚೌಡಯ್ಯನವರ ಚಿಂತನೆಗಳು ಇಂದಿಗೂ ಹೇಗೆ ಪ್ರಸ್ತುತ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

**KEYWORDS:** ಅಂಬಿಗರ ಚೌಡಯ್ಯ, ವಚನ ಸಾಹಿತ್ಯ, ಜೀವನ ಮೌಲ್ಯಗಳು, ಶರಣ ಚಳವಳಿ, ಸಾಮಾಜಿಕ ಸಮಾನತೆ.

* **ಡಾ. ಎಸ್.ಬಿ. ಜಾಧವ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಜಿ.ಆರ್. ಗಾಂಧಿ ಕಲಾ, ಶ್ರೀ ವಾಯ್.ಎ. ಪಾಟಿಲ ವಾಣಿಜ್ಯ ಹಾಗೂ ಶ್ರೀ ಎಂ.ಪಿ. ದೊಶಿ ವಿಜ್ಞಾನ ಪದವಿ ಮಹಾವಿದ್ಯಾಲಯ, ಇಂಡಿ.

**ಪ್ರಸ್ತಾವನೆ:**

ಕನ್ನಡ ನಾಡು ಮತ್ತು ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನ ಸಾಮಾಜಿಕ, ಸಾಹಿತ್ಯಕವಾಗಿ ಮಹತ್ವದ ಕಾಲಘಟ್ಟವಾಗಿದೆ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜಿಕ ಚಳವಳಿಯೊಂದು ಸಾಹಿತ್ಯವನ್ನೇ ಪ್ರಮುಖ ಸಾಧನವಾಗಿ ಬಳಸಿ ಸಮಾಜವನ್ನು ಪರಿವರ್ತಿಸುವ, ಸಮಾಜದಲ್ಲಿನ ಜಾತಿಯ ಮೇಲು ಕೀಳು, ಅಸ್ಪೃಶ್ಯತೆ, ಗಂಡು ಹೆಣ್ಣಿನ ಅಸಮಾನತೆ, ಡಾಂಭಿಕ ಧಾರ್ಮಿಕ ಆಚರಣೆ ಮೊದಲಾದ ಚಿಂತನೆಗಳ ಮೂಲಕ ಸಮಾಜದ ಬದುಕನ್ನು ಪರಿವರ್ತಿಸುವ ಪ್ರಯತ್ನವನ್ನು ನಡೆಸಿತು. ಕಂದಾಚಾರದ ಮೂಲಕ ಸಾಮಾಜಿಕ, ಧಾರ್ಮಿಕ ಆಚರಣೆಗಳನ್ನು ನಿರಾಕರಿಸಿ, ಸರಳವಾಗಿ ಭಕ್ತಿಯ ಅಭಿವ್ಯಕ್ತಿಗೆ ವೇದಿಕೆಯೊಂದನ್ನು ನಿರ್ಮಾಣಗೊಳಿಸಿತು. ಈ ಕಾರ್ಯಕ್ಕಾಗಿಯೇ ಬಸವಣ್ಣನು ಸಾಹಿತ್ಯ, ಭಕ್ತಿ, ಧಾರ್ಮಿಕ ಆಚರಣೆಗಳನ್ನು ಸಾಧನವಾಗಿ ಬಳಸಿಕೊಂಡರು.

ಈ ಕಾಲಘಟ್ಟದಲ್ಲಿ ಅಂಬಿಗರ ಚೌಡಯ್ಯ ಎಂಬ ಅಂಕಿತದಲ್ಲಿ ವಚನ ರಚನೆಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದವನು ಅಂಬಿಗರ ಚೌಡಯ್ಯ. ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಲ್ಲಿ ಅನುಭಾವಿ. ಈತನ ಹೆಸರೇ ಸೂಚಿಸುವಂತೆ ದೋಣಿ ನಡೆಸುವ ಕಾಯಕದವನು. ತಾನು ಕೇವಲ ತುಂಬಿದ ಹೊಳೆಯಲ್ಲಿ ದೋಣಿಗೆ ಹುಟ್ಟುಹಾಕುವ ಅಂಬಿಗ ಮಾತ್ರವಲ್ಲ, ಭವಸಾಗರದಲ್ಲೂ ಹುಟ್ಟುಹಾಕುವ ಕೌಶಲವುಳ್ಳವ ಎಂದು ಹೇಳಿಕೊಳ್ಳುವುದರಲ್ಲಿ ತನ್ನ ಅನುಭಾವ ದೃಷ್ಟಿಯನ್ನು ಪ್ರಕಟಿಸಿದ್ದಾನೆ. ದಿಟ್ಟ ಮಾತಿನ ನೇರ ನುಡಿಗಳ ಶಿವಶರಣ ವಚನಕಾರ. ಉಳಿದೆಲ್ಲ ವಚನಕಾರರಿಗಿಂತ ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವ ಇವರದು. ಈತ ಯಾರಿಗೂ ಅಂಜದೇ ನೇರ ನಡೆನುಡಿಯವನೆಂದು 'ದಿಟ್ಟ ಅಂಬಿಗರ ಚೌಡಯ್ಯ' ಎಂಬ ಅವನ ಕುರಿತಾದ ಮಾತೇ ಸ್ಪಷ್ಟವಾಗುತ್ತದೆ.

**ಜೀವನ:** ಈತನ ಊರು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಚೌಡದಾನಪುರ. ಕಾಲ: ಇವರ ತಂದೆ ವಿರೂಪಾಕ್ಷ, ತಾಯಿ ಪಂಪಾದೇವಿ. 1150. ಬಸವಣ್ಣನ ಅನುಭವಮಂಟಪದಲ್ಲಿ ಸಮಾನ ಭೂಮಿಕೆಯ ಸಮ್ಮೇಳನದಲ್ಲಿ ಸೇರಿಕೊಂಡವ. ಬಸವಣ್ಣನವರಿಂದ ಲಿಂಗ ದೀಕ್ಷೆಯನ್ನು ಪಡೆದವನು. ತನ್ನ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದನು. ಈತನ ವಚನಗಳಲ್ಲಿ ವಸ್ತುನಿಷ್ಠತೆ, ಮೊನಚಾದ ವ್ಯಂಗ್ಯ ವಿಡಂಬನೆ ಎದ್ದು ಕಾಣುತ್ತದೆ. ಈತನ ಜೀವನ ಮೌಲ್ಯ ಹಾಗೂ ಬದುಕಿನಲ್ಲಿ ಇರಿಸಿಕೊಂಡ ಆದರ್ಶಗಳನ್ನು ಕಾಣಬಹುದಾಗಿದೆ. ಈತನ ವಚನಗಳು ಜೀವನ ಮೌಲ್ಯಗಳನ್ನು ಅಭಿವ್ಯಕ್ತಿಸುವ ಪ್ರಮಾಣಗಳಾಗಿವೆ. ಧರ್ಮ, ಸಮಾಜ, ಆಚರಣೆ, ಗುರು ಇವೇ ಮೊದಲಾದ ವಿಚಾರಗಳ ಬಗ್ಗೆ ಈತನ ವಚನಗಳು ಅಭಿವ್ಯಕ್ತಿಸುವ ಚಿಂತನೆಗಳತ್ತ ಗಮನ ಹರಿಸಿದರೆ ಮೇಲಿನ ಮಾತು ಸ್ಪಷ್ಟವಾಗುತ್ತದೆ. ಈತ ಸಮಾಜವನ್ನು ತಿದ್ದುವ ಹಾಗೂ ಉಪದೇಶಿಸುವ ಬದುಕಿನ ಮೌಲ್ಯವನ್ನು ಈ ಕೆಳಗಿನ ವಚನ ಸ್ಪಷ್ಟವಾಗುತ್ತದೆ. ಚುಚ್ಚು ಮಾತಿನ ಮೂಲಕ

**ಕಂಥ ತೊಟ್ಟವ ಗುರುವಲ್ಲ**
**ಕಾವಿ ಹೊತ್ತವ ಜಂಗಮನಲ್ಲ**
**ಶೀಲ ಕಟ್ಟಿದವ ಶಿವಭಕ್ತನಲ್ಲ**
**ನೀರು ತೀರ್ಥವಲ್ಲ**
**ಕೂಳು ಪ್ರಸಾದವಲ್ಲ**
**ಹೌದೆಂಬುವನ ಬಾಯ ಮೇಲೆ**
**ಅರ್ಥ ಮಣದ ಪಾದರಕ್ಷೆ ತೆಗೆದುಕೊಂಡು**

**ಮಾಸಿ ಕಡಿಮೆಯಿಲ್ಲದೇ ತೂಗಿತೂಗಿ ಟೊಕಟೊಕನೆ**
**ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯ**

ಈ ಮಾತುಗಳು ಯಾವ ವಿಚಾರಗಳ ಕುರಿತಾಗಿವೆ ಎಂದು ಸರಳವಾಗಿ ತಿಳಿಯಬಹುದಾಗಿದೆ. ತೀರ್ಥ, ಪ್ರಸಾದ, ಕಾವಿ ಸಮಕಾಲೀನ ಸಮಾಜದ ನಂಬಿಕೆಗೆ ಕೊಟ್ಟ ಪೆಟ್ಟಾಗಿದೆ. ಇದೇ ರೀತಿ ಸ್ತ್ರೀ ಸಮಾನತೆ ಕೂಡು ಸಂಸಾರದ ಸಮಾಜದ ಬಗ್ಗೆ ಕಳಕಳಿ ಈ ಕೆಳಗಿನ ವಚನಗಳಲ್ಲಿ ಕಂಡು ಬರುತ್ತದೆ.

**ಕೇಳಿರಯ್ಯ ಮಾನವರೆ**
**ಗಂಡ ಹೆಂಡಿರ ಮನಸ್ಸು ಒಂದಾಗಿದ್ದರೆ**
**ದೇವರ ಮುಂದೆ ನಂದಾ ದೀವಿಗೆ ಮೂಡಿಸಿದ ಹಾಗೆ**
**ಗಂಡ ಹೆಂಡಿರ ಮನಸು ಬೇರಾದರೆ**
**ಗಂಜುಳದೊಳಗೆ ಹಂದಿ ಹೊರಳಾಡಿ**
**ಒಂದರ ಮೇಲೊಂದು ಬಂದು ಮೂಸಿದ ಹಾಗೆ**
**ಥೀ ಥೀ ಇದು ಭಕ್ತಿಯಲ್ಲರಿ**
**ಎನ್ನುವ ಅಂಬಿಗರ ಚೌಡಯ್ಯ ಲಿಂಗಭೇದವನ್ನು ಕುರಿತು**
**ಮೊಲೆ ಮುಡಿ ಬಂದರೆ ಆ ಪಿಂಡವನ್ನು ಹೆಣ್ಣೆಂಬರು**
**ಗಡ್ಡ ಮೀಸೆ ಬಂದರೆ ಆ ಪಿಂಡವನ್ನು ಗಂಡೆಂಬರು**
**ಈ ಇಬ್ಬರ ನಡುವೆ ಸುಳಿವ ಆತ್ಮನು**
**ಹೆಣ್ಣು ಅಲ್ಲ ಗಂಡೂ.**

ದುರಾಶೆಯ ಬದುಕನ್ನು ಕುರಿತು ಅಂಬಿಗರ ಚೌಡಯ್ಯನ ರಚನೆ ಗಮನ ಸೆಳೆಯುತ್ತದೆ. ಆತ 'ಲೌಕಿಕ ಬದುಕೇ ಅಂತಿಮವಲ್ಲ. ಅದನ್ನು ಮೀರಿದ ಸಾರ್ಥಕ ಬದುಕು ಬೇರೊಂದಿದೆ' ಎಂಬುದನ್ನು ಈ ವಚನದ ಮೂಲಕ ಉಪದೇಶಿಸುತ್ತಾನೆ. ಈತನ ವಚನ ರಚನೆಯಲ್ಲಿನ ಕಾವ್ಯ ಸೌಂದರ್ಯಕ್ಕೂ ಇದು ಸಾಕ್ಷಿಯಾಗಿದೆ.

**ಬಡತನಕ್ಕೆ ಉಂಬುವ ಚಿಂತೆ, ಉಣಲಾರದೆ ಉಡುವ ಚಿಂತೆ**
**ಉಡಲಾರದೆ ಇಡುವ ಚಿಂತೆ, ಇಡಲಾರದೆ ಹೆಂಡಿರ ಚಿಂತೆ**
**ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ**
**ಬದುಕಾದರೆ ಕೇಡಿನ ಚಿಂತೆ ಕೇಡಾದರೆ ಮರಣದ ಚಿಂತೆ**
**ಇಂತೀ ಹಲವು ಚಿಂತೆ ಚಿಂತೆಯಲ್ಲಿಪ್ಪವರ ಕಂಡೆನು**
**ಶಿವಚಿಂತೆಯೆಲ್ಲಿದ್ದರೊಬ್ಬನು ಕಾಣೆನೆಂದಾತ**
**ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.**

ಲೌಕಿಕದಿಂದ ಆಧ್ಯಾತ್ಮ ಮಾರ್ಗದ ದಾರಿ ತೋರುತ್ತಾನೆ. ತನ್ನ ಕಾಲಘಟ್ಟದ ಸಾಮಾಜಿಕ ಅಹಂಕಾರದ ಭಕ್ತಿಯನ್ನು ನಿರಾಕರಿಸುತ್ತಾನೆ. ನೈತಿಕ, ಸಾಮಾಜಿಕ ಮೌಲ್ಯಗಳಿಗೆ ಬೆಲೆಕೊಡುವ ಅಂಬಿಗರ ಚೌಡಯ್ಯ ಕೆಳಗಿನ ವಚನಗಳಲ್ಲಿ ಸಾರಾಸಗಟಾಗಿ ಅವುಗಳನ್ನು ತಿರಸ್ಕರಿಸಿ ತನ್ನ ಬದುಕಿನ ಚಿಂತನೆಗಳೇನು ಎಂಬುದನ್ನು ದಿಟ್ಟವಾಗಿ ತಿಳಿಸಿದ್ದಾನೆ.

**ವೇದಗಳಲ್ಲುಳ್ಳೊಡೆ ಪ್ರಾಣಿವಧೆಯಪ್ಪುದೇ**
**ಶಾಸ್ತ್ರದಲ್ಲುಳ್ಳೊಡೆ ಸಮಯವಾದಪ್ಪುದೇ**
**ಪರ್ವತದಲ್ಲುಳ್ಳೊಡೆ ಹೋದವರುಬಹರೇ**
**ನಿರ್ಬುದ್ಧಿ ಮಾನವರನೇನೆಂಬೆ!**
**ಮನ, ವಚನ, ಕಾಯ ಶುದ್ಧಿಯಾಗಿಪ್ಪಾತನ ಹೃದಯದಲ್ಲಿ**

**ನಿಮ್ಮ ಕಂಡೆನೆಂದನಂಬಿಗರ ಚೌಡಯ್ಯ**

ಇಲ್ಲಿ ತ್ರಿಕರಣ ಶುದ್ಧಿಯ ಬಗ್ಗೆ ಹೇಳುವ ಈತ ಲೌಕಿಕ ಆಚರಣೆಯ ಒಳಗಿರುವ ಟೊಳ್ಳುತನವನ್ನು ಬಯಲುಗೊಳಿಸುತ್ತಾನೆ. ಈತ ಬಸವಣ್ಣನಂತೆ ನಿಜ ಭಕ್ತಿಯ ಬಗ್ಗೆ ಹೀಗೆ ಹೇಳುತ್ತಾನೆ.

**ಕಲ್ಲ ನಾಗರ ಕಂಡರೆ ಹಾಲು ಹೊಯ್ಯೆಂಬರು**
**ಬದುಕಿನ ನಾಗರ ಕಂಡರೆ ಕೊಲ್ಲುಕೊಲ್ಲೆಂಬರು**
**ನಿಜದ ದೇವರು ಬಂದರೆ ಇಲ್ಲವೆಂದಟ್ಟುವರು**
**ಉಣ್ಣದ ಕಲ್ಲು ಪ್ರತಿಮೆಯ ಮುಂದಿಟ್ಟು ಉಣ್ಣೆಂಬರು**
**ಇಂತಹ ವೇಷ ಡಂಬ ತೊತ್ತಿಂಗೆ**
**ವಿಚಾರಿಸದೆ ಲಿಂಗವ ಕೊಡಲಾಗದೆಂದಾತನು ಅಂಬಿಗರ ಚೌಡಯ್ಯ**

ಇಲ್ಲಿ ಈತ ನೇರವಾಗಿ ಸುಳ್ಳುಗಳ ಸುತ್ತ ಕಟ್ಟಿಕೊಂಡ ಬದುಕನ್ನೇ ನಿರಾಕರಿಸುವ ಚಿಂತನೆಯಿದೆ. ತನ್ನ ಕಾಲಘಟ್ಟದ ಸಮಾಜದಲ್ಲಿ ಬಲವಾಗಿ ಬೆಳೆದಿದ್ದ ಜಾತೀಯತೆಯನ್ನು ಕಟುವಾಗಿ ವಿರೋಧಿಸುವ ಈತ ಈ ಕೆಳಗಿನ ವಚನದಲ್ಲಿ ಜಾತಿಯ ಮೂಲರೂಪ ಯಾವುದು ಎಂಬುದನ್ನು..

**ಹೊಲೆಯ ಹೊಲೆಯ ಎಂದಡೆ ಹೊಲೆಯರೆಂತಪ್ಪರಯ್ಯ**
**ಹೊಲೆಯ ಹೊಲೆಕೇರಿಯಲ್ಲಿರುವರು ಊರೊಳಗಿಲ್ಲವೇ ಹೊಲೆಯರು**
**ತಾಯಿಗೆ ಬೈದವನೇ ಹೊಲೆಯ**
**ತಂದೆಗೆ ಉತ್ತರ ಕೊಟ್ಟವನೇ ಹೊಲೆಯ**
**ಕೊಡುವ ದಾನಕೆ ಅಡ್ಡ ಬಂದವನೆ ಹೊಲೆಯ**
**ನಡೆವ ದಾರಿಗೆ ಕೊಳ್ಳಿ ಹಚ್ಚಿದವನೇ ಹೊಲೆಯ**
**ಹತ್ತು ಆಡಿದರೆ ಒಂದು ನಿಜವಲ್ಲದವನೇ ಹೊಲೆಯ**
**ಚಿತ್ತದಲ್ಲಿ ಪರಸತಿಯ ಬಯಸಿದರೆ ಹೊಲೆಯ**

ಎಂದು ಹೇಳುವ ಅಂಬಿಗರ ಚೌಡಯ್ಯ ಜಾತಿಯನ್ನು ಗುಣದಿಂದ ನಡವಳಿಕೆಯಿಂದ ಗುರುತಿಸುತ್ತಾನೆ.

ಇದೇ ರೀತಿ ಸ್ಥಾವರ ಪೂಜೆಗಳನ್ನು ನಿರಾಕರಿಸುವ ಅಂಬಿಗರ ಚೌಡಯ್ಯ

**ಕಲ್ಲದೇವರ ಪೂಜೆಯ ಮಾಡಿ**
**ಕಲಿಯುಗದ ಕತ್ತಲೆಗಳಾಗಿ ಹುಟ್ಟಿದರು**
**ಮಣ್ಣ ದೇವರ ಪೂಜಿಸಿ ಸ್ವರ್ಗಕ್ಕೇರದೇ ಹೋದರು**
**ಜಗದ್ಭರಿತನಾದ ಪರಶಿವನೊಳಗೆ**
**ಕಿಂಕರನಾದ ಶಿವಭಕ್ತನೇ ಶ್ರೇಷ್ಠ ಎಂದಿದ್ದಾರೆ ಅಂಬಿಗರ ಚೌಡಯ್ಯ**

ಇದೇ ರೀತಿ ಅರಿವು, ಜ್ಞಾನ, ಶುದ್ಧ ಭಕ್ತಿ ಮೊದಲಾದವುಗಳ ಬಗೆಗೆ ಪ್ರಶ್ನಿಸುವ ಅಂಬಿಗರ ಚೌಡಯ್ಯ ಅರಿವಿನ ಪಥವನ್ನು ಅರಿತುಕೊಂಡು ಒಳಗಣ ಅರಿವು ಹೆಚ್ಚಿಸಿ ಕೊಳ್ಳಬೇಕು ಎನ್ನುತ್ತಾನೆ. ಈತ ಎಲ್ಲೂ ಕೂಡಾ ಪರಂಪರೆಯ ಶುದ್ಧ ಮಡಿಯ ನೆಲೆಯಲ್ಲಿ ಭಕ್ತಿಯಲ್ಲಿ ಶಿವನ ಒಲಿಸುವಿಕೆಯನ್ನು ತನ್ನದಾಗಿಸಿಕೊಳ್ಳದೇ ಲೌಕಿಕ ಬದುಕಿನ ಪರಿಶುದ್ಧತೆಯನ್ನೇ ಪ್ರಮುಖವಾಗಿಸಿಕೊಂಡವನು. ಭಕ್ತಿ ಎಂಬುದು ಅಂಬಿಗರ ಚೌಡಯ್ಯನ ದೃಷ್ಟಿಯಲ್ಲಿ ಸಾಮಾಜಿಕ ಬದಲಾವಣೆಯ ಮಾರ್ಗ. ಈ ಕೆಳಗಿನ ವಚನದಲ್ಲಿ

**ಅಂಗದ ಅಂದ ಮಾಡಿಕೊಂಡು ತಿರುಗುವ**

**ಭಂಗಗೇಡಿಗಳೇ ನೀವು ಕೇಳಿರೊ**
**ಅಂಗಕ್ಕೆ ಅಂದವಾದುದೆಂದರೆ**
**ಗುರುವಿಗೆ ತನುವ ಕೊಟ್ಟಿರುವುದೇ ಚಂದ**
**ಜಂಗಮಕ್ಕೆ ಧನವ ಕೊಟ್ಟಿರುವುದೇ ಚಂದ**
**ಶಿವನ ಪಾದ ಹೊಂದುವುದೇ ಚಂದ**

ಎನ್ನುತ್ತಾನೆ.

ಶಿವಭಕ್ತರಷ್ಟೇ ಅಲ್ಲ, ಶಿವಭಕ್ತರಿಗೆ ಮಾರ್ಗದರ್ಶನ ಮಾಡುವ ಗುರುಗಳು ವೀರಶೈವ ತತ್ವದಂತೆ ಅಂತರಂಗ ಬಹಿರಂಗ ಶುದ್ಧಿಗಳಾಗಿರಬೇಕು ಎನ್ನುತ್ತಾರೆ. ಗುರುವಿನಿಂದ ಅರಿವು ಪಡೆದು ಬದುಕಿನಲ್ಲಿ ಶುದ್ಧತೆಯನ್ನು ಪಡೆದು ಭ್ರಮೆಯಿಂದ ಹೊರಬರಬೇಕಾದ ಅನಿವಾರ್ಯತೆಯನ್ನು ಈ ಕೆಳಗಿನ ವಚನದಲ್ಲಿ

**ಜಾತಿಭ್ರಮೆ ನೀತಿಭ್ರಮೆ ಎಂಬ ಕರ್ಮಗಳನ್ನು**
**ಫಲಿಸಿ ಕಳೆಯ ಬಲ್ಲಾತನೇ ಯೋಗಿ**
**ಕ್ಷೇತ್ರ ಭ್ರಮೆ ತೀರ್ಥಭ್ರಮೆ, ಪಾಷಾಣ ಭ್ರಮೆ**
**ಎಂಬ ಕರ್ಮಗಳನ್ನು ನೀಕರಿಸಿ ಕಳೆಯ ಬಲ್ಲಾತನೆ ಯೋಗಿ**
**ಲೋಕಕ್ಕಂಜಿ ಲೌಕಿಕದ ಎರವಗೊಂಡು ನಡೆವಾತನೇ**
**ಯೋಗಿ ಎಂದಾತನೆ ಅಂಬಿಗರ ಚೌಡಯ್ಯ.**

ಜಾತಿ, ಕರ್ಮದ ಆಚರಣೆ ಪ್ರಯೋಜನವಿಲ್ಲದ್ದು, ಅವುಗಳನ್ನು ಮೀರಿದ ಬದುಕನ್ನು ಸಮಾಜಕ್ಕೆ ಬದುಕಿ ತೋರಬೇಕು ಎಂಬ ನಡೆನುಡಿಯವನು ಅಂಬಿಗರ ಚೌಡಯ್ಯ. ಸಮಾಜವನ್ನು ಪರಿಶುದ್ಧಗೊಳಿಸಬೇಕೆಂಬ ಭಕ್ತನು ತನ್ನ ಭಕ್ತಿ ಮತ್ತು ನಡವಳಿಕೆಯಲ್ಲಿ ತಾನು ಪರಿಶುದ್ಧನಾಗಿರಬೇಕು. ಆಗ ಸಮಾಜಕ್ಕೆ ಶುದ್ಧತೆ ತನ್ನಿಂದ ತಾನೇ ಲಭ್ಯವಾಗುತ್ತದೆ ಎನ್ನುತ್ತಾನೆ.

ಗುರು ಮತ್ತು ಗುರುದೀಕ್ಷೆಯನ್ನು ತೀಕ್ಷ್ಣಮಾತುಗಳಲ್ಲಿ ವಿಡಂಬಿಸುವ ಅಂಬಿಗರ ಚೌಡಯ್ಯ ಅರಿಯದ ಗುರುವಿನ ಜತೆಯಲ್ಲಿ ಅರಿಯದ ಶಿಷ್ಯ ಸೇರುವುದೆಂದರೆ ಕುರುಡ ಕುರುಡನ ಕೈಯ ಹಿಡಿದಂತೆ ಎಂದು ಹೇಳುವ ಈತ ಇನ್ನೊಂದು ವಚನದಲ್ಲಿ

**ಅರಿಯದ ಗುರು ಅರಿಯದ ಶಿಷ್ಯಂಗೆ**
**ಅನುಗ್ರಹ ಮಾಡಿದಡೇನಪ್ಪುದೆಲವೋ**
**ಅಂಧಕನ ಕೈಯನಂಧಕ ಹಿಡಿದಡೆ**
**ಮುಂದನಾರು ಕಾಬರು ಹೇಳಲೇ ಮರುಳೆ**
**ತೊರೆಯಲಿದ್ದವನ ನೀಸಲರಿಯದವ**
**ತೆಗೆವ ತೆರನಂತೆಂದನಂಬಿಗರ ಚೌಡಯ್ಯ**

ಈ ತೀಕ್ಷ್ಣ ಮಾತುಗಳಲ್ಲಿ ಗುರುಶಿಷ್ಯರ ಅಪವಿತ್ರ ಸಂಬಂಧವನ್ನು ವಿಡಂಬಿಸುತ್ತಾನೆ. ಸ್ವಾರ್ಥ ಲಾಭದ ಗುರುಗಳನ್ನು ಹಾಗೂ ಜಾತಿ ಅಹಂಕಾರದಿಂದ ಕೆಳಜಾತಿಯ ವ್ಯಕ್ತಿಗೆ ಶಿಷ್ಯತನದ ದೀಕ್ಷೆಯನ್ನು ನಿರಾಕರಿಸುವ, ಬೋಧೆಯಿಂದ ಹೊಟ್ಟೆ ಹೊರೆಯುವ ಗುರುಗಳನ್ನು ಈ ಕೆಳಗಿನ ವಚನ ಲೇವಡಿ ಮಾಡುತ್ತದೆ.

**ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ**
**ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು**
**ಅಕ್ಕಿ ಕಣಕವ ತೆಗೆದುಕೊಂಡು ಹೋಗುವ ಗುರುವಿಗೆ ಕಂಡರೆ**
**ಕೆಡವಿ ಹಾಕಿ ಮೂಗನೆ ಕೊಯ್ದು**

**ಇಟ್ಟಂಗಿಯ ಕಲ್ಲಿನಲ್ಲೆ ತಿಕ್ಕಿ ಸಾಸಿವೆಯ ಹಿಟ್ಟನೆ ತಳೆದು**
**ಮೇಲೆ ಲಿಂಬಿಯ ಹುಳಿಯನೆ ಹಿಂಡಿ**
**ಪಡುವ ಗಾಳಿಗೆ ಹಿಡಿಯೆಂದಾತ ನಮ್ಮ ಅಂಬಿಗರ ಚೌಡಯ್ಯ.**

ದೋಣಿ ನಡೆಸುವ ವೃತ್ತಿಯಲ್ಲಿದ್ದ ಅಂಬಿಗರ ಚೌಡಯ್ಯನನ್ನು ದಾರ್ಶನಿಕ ವಚನಕಾರನೆಂದೇ ಗುರುತಿಸಲಾಗುತ್ತದೆ. ಮಾತಿನಲ್ಲಿ ದಾಕ್ಷಿಣ್ಯವಿಲ್ಲದ ಅಂಬಿಗರ ಚೌಡಯ್ಯ ತನಗಿಂತ ಹಿರಿಯ ಹಾಗೂ ಹಿಂದಿನ ವಚನಕಾರರನ್ನು ಅನೇಕ ಬಾರಿ ಪ್ರಶ್ನಿಸುವ ತೀಕ್ಷ್ಣ ಭಾವದ ವಿಶ್ಲೇಷಿಸುವಾಗ ಹಿರಿಯ ವಚನಕಾರರನ್ನು ಬಯಲು ಮಾಡುತ್ತಾನೆ. ಒಡಲು ಭಕ್ತಿದಾಸೋಹ ಮುಂತಾದ ವಿಚಾರಗಳ ಕುರಿತು ಪ್ರಶ್ನೋತ್ತರ ರೀತಿಯ ಇವನ ವಚನ ರಚನೆ ಸಾಹಿತ್ಯಕವಾಗಿಯೂ ಪ್ರೌಢವೆನಿಸುತ್ತದೆ.

ಭಕ್ತಿಯ ಪರಿಶುದ್ಧತೆ, ನೈತಿಕತೆಯನ್ನು ರೂಢಿಸಿಕೊಂಡ ಸಮಾಜವೊಂದು ಲಿಂಗ, ಜಾತಿ, ವರ್ಗ ಇನ್ನಿತರ ಚೌಕಟ್ಟನ್ನು ಮೀರಿ ನವ ನಿರ್ಮಾಣದತ್ತ ಸಾಗಬೇಕೆಂಬುದೇ ಇವನ ವಚನಗಳ ಆಶಯವಾಗಿದೆ. ತನ್ನ ವಚನಗಳಲ್ಲಿ ಈತ ನಿರೀಕ್ಷಿಸುವ ಬದುಕೇ ಈತನ ಜೀವನ ಮೌಲ್ಯವೂ ಆಗಿದೆ.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ.ಎಂ. ಹಾಗೂ ಇತರೆ (ಸಂಪಾದಕರು), (1993), ಸಮಗ್ರ ವಚನ ಸಂಪುಟಗಳು 1–15, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
2. ವೀರಣ್ಣ ರಾಜೂರ (ಸಂ.), (2003), ಬಸವಣ್ಣನವರ ಪ್ರಮುಖ ಚಿಂತನೆಗಳು, ಧಾರವಾಡ: ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
3. ವೀರಣ್ಣ ರಾಜೂರ (ಸಂ.), (2003), ವಚನಸಾಹಿತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯ ಮುಖಾಮುಖಿ, ಧಾರವಾಡ: ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
4. ಶಿವಮೂರ್ತಿ ಮುರುಘಾ ಶರಣರು, (2019), ಮಹಾಬೆರಗು, ಚಿತ್ರದುರ್ಗ: ಅಲ್ಲಮಪ್ರಭು ಸಂಶೋಧನ ಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಬಸವಕೇಂದ್ರ, ಶ್ರೀ ಮುರುಘಾಮಠ.
5. ಶಿವಮೂರ್ತಿ ಮುರುಘಾ ಶರಣರು, (2022), ವಚನ ಸಂಸ್ಕೃತಿಯ ಸಮುದಾಯ ತತ್ವ ಮತ್ತು ಸಮಕಾಲೀನ ಸಂದರ್ಭ, ಚಿತ್ರದುರ್ಗ: ಅಲ್ಲಮಪ್ರಭು ಸಂಶೋಧನ ಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಬಸವಕೇಂದ್ರ, ಶ್ರೀ ಮುರುಘಾಮಠ.
6. ಉಮೇಶ ಎಚ್.ಎಸ್. (ಸಂ.), (2022), ಅರುಹು ಕುರುಹು (ಸಂಪುಟ–12, ಸಂಚಿಕೆ–47, ಜನವರಿ–ಮಾರ್ಚ್)